***OS 222/2022 PW -1***

ದಿನಾಂಕ:: 18-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

***ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎಸ್ ವಿ ಎನ್ ರವರಿಂದ***

| | |
|---|---|
| Ex.P - 7 | ***Canara bank statement***<br>***( marked subject to objections )*** |

***ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ಆರ್ ಎಮ್ ರವರಿಂದ***

***ಸಾಕ್ಷಿಯು ತನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ನುಡಿದ ಕಾರಣ, ಶ್ರೀ ಎಸ್ ಬಿ ವಕೀಲರನ್ನು ತರ್ಜುಮೆದಾರರನ್ನಾಗಿ ನೇಮಕ ಮಾಡಿದ್ದು, ಸಾಕ್ಷಿಯು ತೆಲುಗಿನಲ್ಲಿ ಸಾಕ್ಷ ನುಡಿದಿದ್ದು ಅದನ್ನು ಶ್ರೀ. ಎಸ್ ಬಿ ವಕೀಲರು ಕನ್ನಡ ಭಾಷೆಗೆ ತರ್ಜುಮೆ ಮಾಡಿ ಹೇಳಿದಂತೆ ಬರೆದುಕೊಳ್ಳಲಾಗಿರುತ್ತದೆ.***

1. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಈ ದಾವೆಯನ್ನು ಪ್ರತಿವಾದಿಯ ವಿರುದ್ದ ಸೈಟಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ಸೈಟಿನ ವಿಚಾರವನ್ನು ನಮ್ಮ ಊರಿನಲ್ಲಿ ನಮ್ಮ ಮನೆಯಲ್ಲಿ ಮಾತನಾಡಿದ್ದು, ಆ ಕಾಲಕ್ಕೆ ಪ್ರತಿವಾದಿ ಮತ್ತು ಕ್ರಿಷ್ಣಾ ರೆಡ್ಡಿ ಮತ್ತು ಮುನಿನಾರಾಯಣಪ್ಪ ನವರು ಹಾಜರಿದ್ದರು. ಕ್ರಿಷ್ಣಾರೆಡ್ಡಿ ರವರು ತಿಮ್ಮೇನಹಳ್ಳಿಗೆ ಸೇರಿದವರು ಮತ್ತು ಮುನಿನಾರಾಯಣಪ್ಪನವರು ಚೆನ್ನೇನಹಳ್ಳಿಗೆ ಸೇರಿದವರು. ಕ್ರಿಷ್ಣಾರೆಡ್ಡಿ ಮತ್ತು ಮುನಿನಾರಾಯಣಪ್ಪ ನವರನ್ನು ಸೈಟಿನ ವಿಚಾರವಾಗಿ ನಾನೇ ಮನಗೆ ಕರೆಸಿದ್ದೆ. ಯಾವ ದಿನಾಂಕ ಮತ್ತು ಸಮಯದಂದು ಸದರಿರವರನ್ನು ಮಾತು ಕತೆಗೆ ಕರೆದಿದ್ದೆ ಎಂದು ನೆನಪಿಲ್ಲ. ಮಾತುಕತೆ ನಡೆದ 1-2 ತಿಂಗಳಲ್ಲಿ ಕರಾರನ್ನು ಮಾಡಿಕೊಂಡಿರುತ್ತೇವೆ. ಕರಾರು ಪತ್ರಗಳನ್ನು ಗುಡಿಬಂಡೆಯ ತಾಲ್ಲೂಕು ಕಛೇರಿಯಲ್ಲಿ ಖರೀದಿ ಮಾಡಿರುತ್ತೇವೆ. ಪ್ರತಿವಾದಿ, ಕ್ರಿಷ್ಣಾರೆಡ್ಡಿ ಮತ್ತು ಮುನಿನಾರಾಯಣಪ್ಪ ನವರು ಕರಾರು ಪತ್ರ ಬರೆಯುವಾಗ ಸಂಜೆ 05-00 ಗಂಟೆ ಸಮಯಕ್ಕೆ ತಾಲ್ಲೂಕು ಕಛೇರಿಯ ಬಳಿ ನಾವು ಹಾಜರಿದ್ದೆವು. ನಾವು ವೆಂಕಟಾಚಾರಿ ರವರ ಬಳಿ ಹೋಗಿದ್ದೆವು .

2. ಕರಾರು ಪತ್ರ ಬರೆಯಲು ನಾನು ಮತ್ತು ಪ್ರತಿವಾದಿ ಮಾಹಿತಿ ನೀಡಿದ್ದೆವು. 40,000/- ರೂಗಳ ಹಣ ನೀಡಿರುವ ಬಗ್ಗೆ ಆಗ ಬರೆಸಿದ್ದೇನೆ. ಕರಾರು ಪತ್ರ ಬರೆಯುವಾಗ, ಆದಾರ್ ಕಾರ್ಡ್ , ಪಹಣಿ ಮತ್ತು ಸ್ಟಾಂಪ್ ಪೇಪರ್ ತೆಗೆದುಕೊಂಡು ಹೋಗಿದ್ದೆವು. 200/- ರೂಗಳ ಸ್ಟಾಂಪ್ ಪೇಪರ್ ಅನ್ನು ಚಿಕ್ಕಬಳ್ಳಾಪುರದ ತಾಲ್ಲೂಕು ಕಛೇರಿಯಲ್ಲಿ ನಾನು ಮತ್ತು ಪ್ರತಿವಾದಿ ಖರೀದಿಸಿದ್ದೆವು. ಸದರಿ ಸ್ಟಾಂಪ್ ಪೇಪರ್ ಗೆ ಹಣವನ್ನು ನಾನೇ ಕೊಟ್ಟಿರುತ್ತೇನೆ. ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿಯಲ್ಲಿ ಸ್ಟಾಂಪ್ ಪೇಪರ್ ಖರೀದಿ ಮಾಡಿದ್ದರೂ ಸಹ ವೆಂಕಟಾಚಾರಿ ರವರು ನಮಗೆ ಪರಿಚಯವಿದ್ದ ಕಾರಣ ಗುಡಿಬಂಡೆಗೆ ಬಂದು ಅದನ್ನು ಬರೆಸಿರುತ್ತೇವೆ.ನಮ್ಮ ಗ್ರಾಮವಾದ ಚಿನ್ನೇನಹಳ್ಳಿಯಿಂದ ಚಿಕ್ಕಬಳ್ಳಾಪುರಕ್ಕೆ 25 ಕಿ.ಮೀಟರ್ ಅಂತರವಿರುತ್ತದೆ, ಗುಡಿಬಂಡೆಗೆ 18 ಕಿ.ಮೀಟರ್ ಅಂತರವಿರುತ್ತದೆ. ವೆಂಕಟಾಚಾರಿರವರು ನನಗೆ ಪರಿಚಯವಿದ್ದ ಕಾರಣ ಅವರ ಬಳಿ ಸ್ಟಾಂಪ್ ಪೇಪರ್ ಗುಡಿಬಂಡೆ ಯಲ್ಲಿ ಸಿಗುವ ಬಗ್ಗೆ ಕೇಳಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ವೆಂಕಟಾಚಾರಿರವರ ಬಳಿ ಸೈಟು ವಿಚಾರವಾಗಿ ಮಾತನಾಡಿರುವುದಿಲ್ಲ. ವೆಂಕಟಾಚಾರಿರವರ ಬಳಿ ಸದರಿ ಕರಾರು ಪತ್ರವನ್ನು ಒರತು ಪಡಿಸಿ ಅದಕ್ಕೂ ಮುಂಚೆ ಬೇರೆ ಪತ್ರ ವ್ಯವಹಾರಗಳನ್ನು ಮಾಡಿದ್ದೇನೆ. ಸದರಿರವರ ಬಳಿ 2 ಜಮೀನಿನನ್ನು ಈ ಮುಂಚೆ ಕ್ರಮ ಮಾಡಿಸಿಕೊಂಡಿದ್ದೇನೆ, ಆ ರೀತಿ ಮಾಡಿಸಿಕೊಂಡು ಸುಮಾರು 7 ವರ್ಷಗಳಾಗಿರುತ್ತದೆ. ಈ ಮುಂಚೆ 2 ಜಮೀನಿನುಗಳ ಕ್ರಯ ಪತ್ರ ಮಾಡಿಸುವಾಗ 2 ದಿನಗಳ ಮುಂಚೆಯೇ ವೆಂಕಟಚಾರಿರವರಿಗೆ ಹೇಳಿ ದಾಖಲೆಗಳನ್ನು ತರೆಸಿದ್ದೆ .

3. ಸೈಟಿನ ವಿಚಾರವಾಗಿ ದಾಖಲೆಗಳನ್ನು ತರುವಂತೆ ನನಗೆ ಪ್ರತಿವಾದಿ ತಿಳಿಸಿದ್ದರು. ಚಿಕ್ಕಬಳ್ಳಾಪುರದಿಂದ 4-45 ಯಿಂದ 05-00 ಗಂಟೆ ಸಮಯದಲ್ಲಿ ಕ್ರಿಷ್ಣಾ ರೆಡ್ಡಿ ರವರ ಕಾರಿನಲ್ಲಿ ಹೊರಟಿದ್ದೆವು. ಸದರಿ ಕ್ರಿಷ್ಣಾರೆಡ್ಡಿರವರನ್ನು ನಾನೇ ಫೋನ್ ಮಾಡಿ ಕರೆಸಿಕೊಂಡಿದ್ದೆ. ಚಿಕ್ಕಬಳ್ಳಪುರದಿಂದ ಬಂದು ಗುಡಿಬಂಡೆ ತಲುಪಿದಾಗ ಸಂಜೆ 05-30 ಗಂಟೆಯಾಗಿತ್ತು. 05-45 ಕ್ಕೆ ವೆಂಕಟಾಚಾರಿರವರು ನನಗೆ ಸಿಕ್ಕಿರುತ್ತಾರೆ., ಮಾತುಕತೆ ಮಾಡುವಷ್ಟರಲ್ಲಿ 06-00 ಗಂಟೆ ಯಾಗಿತ್ತು. ಚಿಕ್ಕಬಳ್ಳಾಪುರದಿಂದ ಗುಡಿಬಂಡೆಗೆ 33 ಕಿ.ಮೀಟರ್ ಅಂತರವಾಗುತ್ತದೆ. ನಿಪಿ-1 ರಲ್ಲಿ, ವಾದ ಪತ್ರದಲ್ಲಿ ಹಾಗೂ ತಿಳುವಳಿಕೆ ನೋಟೀಸ್ ನಲ್ಲಿ ಸೈಟಿನ ವಿಚಾರವನ್ನು ಮನೆಯಲ್ಲಿ ಮಾತು ಕತೆ ಮಾಡಿದ ಬಗ್ಗೆ ಹೇಳಿ ಬರೆಸಿರುವುದಿಲ್ಲ.

4. ನಿಪಿ-1 ರಲ್ಲಿನ ಅಂಶಗಳನ್ನು ಚಿಕ್ಕಬಳ್ಳಾಪುರದಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ., ಗುಡಿಬಂಡೆಯಲ್ಲಿ ಅಲ್ಲ. ನಿಪಿ-1 ರಲ್ಲಿನ ಅಂಶಗಳನ್ನು ನಾನು ಕ್ರಿಷ್ಣಾ ರೆಡ್ಡಿ ರವರ ಬಳಿ ಓದಿಸಿ ತಿಳಿದುಕೊಂಡಿರುತ್ತೇನೆ. ವೆಂಕಟಾಚಾರಿರವರು ಚಿಕ್ಕಬಳ್ಳಾಪುರಕ್ಕೆ ಬಂದಿರುವುದಿಲ್ಲ. ನಿಪಿ-1 ಎಲ್ಲಿ ಬರೆಸಿದ್ದೇವೆ ಎಂದು ನನಗೆ ನೆನಪಿಲ್ಲ.

ವಕೀಲರ ಕೋರಿಕೆಯ ಮೇರೆಗೆ ಮು. ಪಾಟೀ ಸವಾಲಿಗೆ ಮುಂದೂಡಲಾಯಿತು .

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)**

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,
ಗುಡಿಬಂಡೆ,

ತರ್ಜುಮೆದಾರರ ಸಹಿ::

ಸಾಕ್ಷಿ ಸಹಿ ::

ಪಾಟೀ ಸವಾಲುಃ ಪ್ರತಿವಾದಿಗಳು ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಕೋರಿದ್ದು ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

Plaintiff is present and examined as PW -1 and got marked Ex.P1 to 5.